# ಶ್ರೀಮಾತೆಯವರ ಪತ್ರಗಳು -೫

ಅನುವಾದ: ಪ್ರವ್ರಾಜಿಕಾ ಧರ್ಮಪ್ರಾಣಾ

## ಪತ್ರ ೧೬

ಶ್ರೀ ಶ್ರೀ ಹರಿಪದಗಳಲ್ಲಿ ಭರವಸೆ

೧೯೦೨

ಮಗು,

ನಿನ್ನ ಪತ್ರ ಸಿಕ್ಕಿ ನನಗೆ ತುಂಬಾ ಸಂತೋಷವಾಯಿತು. ಮಗು, ನೀನು ತುಂಬಾ ಎಚ್ಚರಿಕೆಯಿಂದ ಇರಬೇಕು. ನಿನ್ನ ಕಲ್ಯಾಣಕ್ಕಾಗಿ ನಾನು ಠಾಕೂರರ ಬಳಿ ದಿನವೂ ಪ್ರಾರ್ಥಿಸುತ್ತಿದ್ದೇನೆ. ಭಗವಂತನಲ್ಲಿ ನಿನಗೆ ಭಕ್ತಿ ಇರಲಿ ಮತ್ತು ನಿನಗೆ ಅವನು ದಯೆಯನ್ನು ತೋರಿಸಲಿ. ಯಾವುದರಿಂದ ನಿಮಗೆಲ್ಲ ಶ್ರೀರಾಮಕೃಷ್ಣರಲ್ಲಿ ಭಕ್ತಿ ಉಂಟಾಗುವುದೋ, ಹಾಗೂ ಅವರು ನಿಮಗೆಲ್ಲಾ ದಯೆ, ಶಾಂತಿಗಳನ್ನು ನೀಡುವರೋ, ಅದರಿಂದಲೇ ನನಗೆ ಸಂತೋಷವುಂಟಾಗುವುದು. ಮೋತಿಲಾಲ್, ಕಾಳೀಕೃಷ್ಣರಿಗೆ ನನ್ನ ಆಶೀರ್ವಾದಗಳನ್ನು ತಿಳಿಸು. ನಿನಗೂ ನನ್ನ ಆಶೀರ್ವಾದ. ಶ್ರೀ ರಾಮಕೃಷ್ಣರ ಕೃಪೆಯಿಂದ ನಾನು ಚೆನ್ನಾಗಿದ್ದೇನೆ.ಇಲ್ಲಿ ಎಲ್ಲವೂ ಕ್ಷೇಮ. ಅಲ್ಲಿಯ ಕುಶಲವನ್ನು ತಿಳಿಸಿ ನನಗೆ ಸಮಾಧಾನವನ್ನು ನೀಡು.

ಇತಿ, ೧೩೦೯ನೇ ವರ್ಷ, ಪೌಷ ೨೦ ರವಿವಾರ

*(ಟಿಪ್ಪಣಿ: ಈ ಪತ್ರವನ್ನು ಬಹುಶಃ ಸ್ವಾಮಿ ರಾಮಕೃಷ್ಣಾನಂದರಿಗೆ ಬರೆದಿರಬೇಕು. ಪತ್ರದಲ್ಲಿ ಯಾವುದೇ ವಿಳಾಸವಿಲ್ಲ.)*

## ಪತ್ರ -೧೭

ಓಂ ರಾಮಕೃಷ್ಣ ಜಯತಿ

೧೫.೧.೧೯೦೩
೧೩೦೯ನೇ ವರ್ಷ
ಪೌಷ ೨೯, ಮಂಗಳವಾರ

ಮಗು,

ನಿನ್ನ ಪತ್ರ ಸಿಕ್ಕಿ ಎಲ್ಲವನ್ನೂ ತಿಳಿದುಕೊಂಡೆನು. ನಿನ್ನ ಎರಡು ಪತ್ರಗಳ ಜೊತೆ ಫೋಟೋಗ್ರಾಫ್ ಸಿಕ್ಕಿತು. ನನಗೂ ಅದರ ಮೇಲೆ ಸಂಪೂರ್ಣ ಇಚ್ಛೆ ಇತ್ತು. ನೀನು ಅದನ್ನು ಕಳುಹಿಸಿಕೊಟ್ಟಿರುವೆ. ಅದು ಸಿಕ್ಕಿ ನನಗೆ ತುಂಬಾ ಸಂತೋಷವಾಯಿತು. ನೀನು ಬರೆದಿರುವೆ, ನಿನಗೆ ಧ್ಯಾನ ಮಾಡುವಾಗ ತಲೆ ಕೆಟ್ಟು ಹೋಗುತ್ತಿದೆ ಎಂದು. ಆದ್ದರಿಂದ ಈಗ ನಾನು ಹೇಳುವುದೇನೆಂದರೆ, ಹೆಚ್ಚು ಜಪ ಮಾಡಿದರೆ ಕೊನೆಗೆ ಇನ್ನಷ್ಟು ತಲೆ ಕೆಟ್ಟು ಹೋಗುವುದು. ಆದ್ದರಿಂದ ಎಷ್ಟು ಸಾಧ್ಯವೋ ಅಷ್ಟು ಮಾಡು. ಸ್ಮರಣ, ಮನನ ಮಾಡಬೇಕೆಂದು ಠಾಕುರ್ ಹೇಳುತ್ತಿದ್ದರು. ಭಗವಂತನನ್ನು ಪ್ರಾರ್ಥಿಸಬೇಕು. ಅದರಿಂದ ಎಲ್ಲ ರಕ್ಷಣೆಯೂ ಸಿಗುವುದು. ಅದೇ ರೀತಿ ಮಾಡು. ನಾನು ಸದ್ಯ ಚೆನ್ನಾಗಿದ್ದೇನೆ. ಮನೆಯಲ್ಲಿ



ಎಲ್ಲರೂ ಚೆನ್ನಾಗಿದ್ದಾರೆ. ನಿಮಗೆಲ್ಲರಿಗೂ ನನ್ನ ಆಶೀರ್ವಾದಗಳು. ಕೊಲ್ಕತ್ತಾದಲ್ಲಿ ಎಲ್ಲರೂ ಚೆನ್ನಾಗಿದ್ದಾರೆ.

ಇತಿ ಸ್ಮರಣೆಗಳೊಂದಿಗೆ,

(ನಿನ್ನ ತಾಯಿ)

ಮತ್ತೆ ಶಾರದನ (ಸ್ವಾಮಿ ತ್ರಿಗುಣಾತೀತಾನಂದ) ಪತ್ರ ಸಿಕ್ಕಿತು. ಅವನು ಈಗ ಜಪಾನ್ ದೇಶಕ್ಕೆ ಹೋಗುತ್ತಿದ್ದಾನೆ. ಮಹಾಸಮುದ್ರದಲ್ಲಿ ಆರು ದಿನ ಹಗಲು-ರಾತ್ರಿ ಭಯಂಕರ ಬಿರುಗಾಳಿ ಮಳೆ ಇತ್ತು. ಅದರಿಂದ ಅವನಿಗೆ ತುಂಬಾ ಕಷ್ಟವಾಗಿತ್ತು.

*(ಟಿಪ್ಪಣಿ: ಈ ಪತ್ರವನ್ನೂ ಬಹುಶಃ ಸ್ವಾಮಿ ರಾಮಕೃಷ್ಣಾನಂದರಿಗೆ ಬರೆದಿರಬೇಕು. ಪತ್ರದಲ್ಲಿ ಯಾವುದೇ ವಿಳಾಸವಿಲ್ಲ.)*

## ಪತ್ರ -೧೮

ಶ್ರೀ ಶ್ರೀ ಗುರುದೇವ ಕೃಪೆ

೭.೧೦.೧೯೦೩

ದೀರ್ಘಾಯುವಾಗು,

ಪರಮ ಶುಭಾಶೀರ್ವಾದಗಳನ್ನು ತಿಳಿಸುತ್ತ,

ಮಗು, ನೀನು ಅಂಚೆಯ ಮೂಲಕ ಕಳುಹಿಸಿರುವ ವಸ್ತ್ರ (ಸೀರೆ) ಸಿಕ್ಕಿತು. ಕಾಮಾರಪುಕುರಿನ ಮನೆಯಲ್ಲಿ ಎಲ್ಲರೂ ಚೆನ್ನಾಗಿದ್ದಾರೆ. ನಿನಗೆ ನನ್ನ ವಿಜಯದಶಮಿಯ ಆಶೀರ್ವಾದಗಳು. ವಸಂತ, ಸುರೇಶ ಮತ್ತು ಬ್ರಹ್ಮಚಾರಿ ಮೊದಲಾದವರಿಗೆಲ್ಲ ನನ್ನ ಆಶೀರ್ವಾದವನ್ನು ತಿಳಿಸು. ನಾನು ಸದ್ಯ ಚೆನ್ನಾಗಿದ್ದೇನೆ. ಇಲ್ಲಿ ಎಲ್ಲವೂ ಕ್ಷೇಮ . ನಿಮ್ಮೆಲ್ಲರ ಕ್ಷೇಮದ ಬಗ್ಗೆ ಬರೆ.

ಇತಿ ಆಶೀರ್ವಾದ ಪತ್ರ.

ನಿನ್ನ ತಾಯಿ.
ದಿನಾಂಕ ೧೫, ಆಶ್ವಯುಜ

ಇನ್ನು ಮೇಲೆ ಸೀರೆ ಕಳುಸಿಸುವಾಗ ಇಷ್ಟು ದೊಡ್ಡ ಅಂಚಿನ ಸೀರೆಯನ್ನು ಕಳುಹಿಸಬೇಡ. ಚಿಕ್ಕ ಅಂಚಿನ ಸೀರೆಯನ್ನು ಕಳುಹಿಸು. ಶಾರದನ (ಸ್ವಾಮಿ ತ್ರಿಗುಣಾತೀತಾನಂದ) ಭಾಷಣ ಕೇಳಿ ಸಂತೋಷವಾಯಿತು.

***ಪತ್ರ ಪಡೆದವರ ಹೆಸರು ಮತ್ತು ವಿಳಾಸ:***

*Swami Ramakrishnananda*
*C/o M.N. Narayana Iyanger*
*To His Highness*
*The Yuvaraj of Mysore*
*Mysore*

**ಪತ್ರ - ೧೯**

ಶ್ರೀ ಶ್ರೀ ಗುರುದೇವರ ಕೃಪೆ

೭ ಅಕ್ಟೋಬರ್, ೧೯೦೩

Postal Date

ಚಿರಂಜೀವಿಗೆ,

ಪರಮ ಶುಭಾಶೀರ್ವಾದಗಳನ್ನು ತಿಳಿಸುತ್ತಾ,

ಮತ್ತೆ ಪ್ರೀತಿಯ ಮಗೂ, ನೀನು ಕಳುಹಿಸಿದ ಹಣ ಸಿಕ್ಕಿತು; ಎಲ್ಲಾ ಸಮಾಚಾರಗಳನ್ನು ತಿಳಿದುಕೊಂಡೆ. ಕೃಷ್ಣ ಕುಮಾರಿಯ ಪರವಾಗಿ ಕಳುಹಿಸಿದ ೫ ರೂಪಾಯಿ ಕೂಡ ಸಿಕ್ಕಿತು. ನೀನು ಕಳುಹಿಸಿರುವ ಪುಸ್ತಕವೂ ಲಭಿಸಿತು. ನಿನಗೆ ನನ್ನ ವಿಜಯದಶಮಿ ಆಶೀರ್ವಾದಗಳು. ನಿನ್ನ ಪತ್ರ ತ್ರಯೋದಶಿಯಂದು ಸಿಕ್ಕಿತು. ಸೊಸೆಗೆ ( ಮಹೇಂದ್ರನಾಥರ ಪತ್ನಿ), ಮತ್ತು ಗಂಡುಮಕ್ಕಳಿಗೂ, ಹೆಣ್ಣುಮಕ್ಕಳಿಗೂ ನನ್ನ ವಿಜಯದಶಮಿಯ ಆಶೀರ್ವಾದಗಳನ್ನು ತಿಳಿಸು. ಸದ್ಯ ಆರೋಗ್ಯದಿಂದ ಚೆನ್ನಾಗಿದ್ದೇನೆ. ಇಲ್ಲಿ ಎಲ್ಲವೂ ಕ್ಷೇಮ. ನಿಮ್ಮೆಲ್ಲರ ಕ್ಷೇಮದ ಬಗ್ಗೆ ಬರೆದು ತಿಳಿಸು.

ಆಶೀರ್ವಾದದೊಂದಿಗೆ,
ನಿನ್ನ ಶ್ರೀಮಾತೆ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ:***

*ಮಹೇಂದ್ರನಾಥ ಗುಪ್ತ ('ಮ')*

* * *

ಸ್ವಾಮಿ ರಾಮಕೃಷ್ಣಾನಂದರು ಮದ್ರಾಸಿನಲ್ಲಿದ್ದಾಗ ಆರಂಭದ ದಿನಗಳಲ್ಲಿ ಐಸ್ ಹೌಸ್‌ನಲ್ಲಿದ್ದರು. (ಹಿಂದೆ 'ಕ್ಯಾಸಲ್ ಕರ್ನನ್' ಎಂದು ಕರೆಯಲ್ಪಡುತ್ತಿದ್ದ, ಈಗ 'ವಿವೇಕಾನಂದರ್ ಇಲ್ಲಂ' ಎಂದು ಮರುನಾಮಕರಣಗೊಂಡಿರುವ ಸ್ಮಾರಕಭವನವಿದು.) ಆಗ ಅವರಿಗೆ ಶ್ರೀಮಾತೆಯವರು ಬರೆದ ಪತ್ರಗಳಿವು. ಸ್ವಾಮಿ ರಾಮಕೃಷ್ಣಾನಂದರು ಆಗತಾನೇ ಆರಂಭಗೊಂಡಿದ್ದ ತಮ್ಮ ಶಾಖೆಯ ಎಲ್ಲಾ ಚಟುವಟಿಕೆಗಳ ಬಗ್ಗೆ, ಹಾಗೂ ತಮ್ಮ ವೈಯಕ್ತಿಕ ವಿಚಾರಗಳ ಬಗ್ಗೆ ಶ್ರೀಮಾತೆಯವರಿಗೆ ತಿಳಿಸುತ್ತಿದ್ದರು. ಶ್ರೀಮಾತೆಯವರೂ ಅತ್ಯಂತ ಪ್ರೀತಿಯಿಂದ ಅವರಿಗೆ ಶ್ರೀರಾಮಕೃಷ್ಣರ ಭಾವಪ್ರಚಾರಕ್ಕೆ ಸ್ಫೂರ್ತಿಯನ್ನು ನೀಡಿ, ಜೊತೆಗೆ ತಮ್ಮ ಕೌಟುಂಬಿಕ ಸಮಸ್ಯೆಗಳನ್ನೂ ತಿಳಿಸಿ ಪತ್ರ ಬರೆಯುತ್ತಿದ್ದರು. ಅವುಗಳಲ್ಲಿ ಕೆಲವು ಪತ್ರಗಳು ಇಲ್ಲಿವೆ:

**ಪತ್ರ -೨೦**

ಶ್ರೀ ಶ್ರೀ ದುರ್ಗಾ ಕೃಪೆ
೮.೨.೧೯೦೫

ಚಿರಂಜೀವಿಗೆ,

ಪ್ರೀತಿಯ ಮಗೂ, ಈಗತಾನೇ ನಿಮ್ಮೆಲ್ಲರ ಕ್ಷೇಮ ಸಮಾಚಾರಗಳ ಪತ್ರ ಸಿಕ್ಕಿ, ಹಿಡಿಸಲಾರದಷ್ಟು ಸಂತೋಷವಾಯಿತು. ಠಾಕೂರರು ಈ ರೀತಿ (ನಿಮ್ಮನ್ನು) ಕೆಲಸಕ್ಕೆ ನೇಮಿಸಿರುವಾಗ ಅವರೇ ರಕ್ಷಿಸುತ್ತಾರೆ. ಮಗು ಕಾಳಿ ದೇವಸ್ಥಾನ ಕಟ್ಟಿಸಿದ್ದಾನೆ ಎಂದು ಕೇಳಿ ಸಂತುಷ್ಟಳಾದೆ. ಮತ್ತೆ ನಾನು ಅಲ್ಲಿಗೆ ಹೋಗುವ ಬಗ್ಗೆ ಬರೆದಿರುವೆ. ಈಗ ಯಾವ ತರಹದಲ್ಲೂ ನಿನ್ನಲ್ಲಿಗೆ ಹೋಗಲು ಸಾಧ್ಯವಿಲ್ಲ. ಕಾರಣ, ಇಲ್ಲಿ ತಮ್ಮಂದಿರನ್ನು ನೋಡಿಕೊಳ್ಳುವವರು ಬೇರೆ ಯಾರೂ ಇಲ್ಲ. ಅದಕ್ಕಾಗಿ ಕೆಲವು ದಿನ ನಾನು ಇಲ್ಲೇ ಇರಬೇಕಾಗಿದೆ. ಇಲ್ಲಿ ಕ್ಷೇಮ. ನಿಮ್ಮೆಲ್ಲರ ಸಮಾಚಾರ ಬರೆದು ತಿಳಿಸು.

ಇತಿ
೧೧ ಶ್ರಾವಣ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*Swamy Ramakrishnanda*
*Castle Kernan, Triplicane*
*Ice House, Madras*

**ಪತ್ರ -೨೧**

ಶ್ರೀ ಶ್ರೀ ಹರಿ
೨೫.೧೦.೧೯೦೬
ವರ್ಷ ೧೩೧೩, ೮ನೇ ಕಾರ್ತಿಕ

ಸುರಕ್ಷಿತವಾಗಿರು.

ಪರಮ ಆಶೀರ್ವಾದಗಳೊಂದಿಗೆ ವಿಶೇಷವೇನಂದರೆ,

ಪ್ರೀತಿಯ ಮಗನ (?) ಪತ್ರ ಸಿಕ್ಕಿ ಸಮಾಚಾರ ತಿಳಿದುಕೊಂಡೆ. ನೀನಂತೂ ಮೀನು, ಮಾಂಸ ತಿನ್ನುವ ಬಗ್ಗೆ ಬರೆದಿರುವೆ. ನಾನು ಅನುಮತಿಯನ್ನು ಕೊಡುತ್ತಿದ್ದೇನೆ.ಇದರಿಂದ ಯಾವ ದೋಷವೂ ಉಂಟಾಗುವುದಿಲ್ಲ. ನೀನು ಮೀನು, ಮಾಂಸ ತಿನ್ನಬಹುದು.

ನಿಮ್ಮೆಲ್ಲರ ಕ್ಷೇಮ ಸಮಾಚಾರವನ್ನು ಯಾವಾಗಲೂ ಬರೆ.

ಇತಿ, ನನ್ನ ಆಶೀರ್ವಾದ ಎಲ್ಲಾ ಭಕ್ತ ವೃಂದದವರಿಗೆ ತಿಳಿಸು.

ಆಶೀರ್ವಾದದೊಂದಿಗೆ — ಶ್ರೀಮಾತೆ.

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*Swamy Ramakrishnanda*
*Castle Kernan, Triplicane, Madras.*